## ಸಿಹಿ ನೀರಾ ಪ್ರಸರಣ ಸಮಿತಿ ಸದಸ್ಯರಿಂದ ಸಿಎಂ, ಸಭಾಧ್ಯಕ್ಷರ ಭೇಟಿ

# ಸಿಹಿ ನೀರಾ ಉತ್ಪನ್ನಗಳ ಉಡುಗೊರೆ

ಪ್ರಜಾವಾಣಿ ವಾರ್ತೆ

**ಚಿತ್ರದುರ್ಗ:** 'ಸಿಹಿ ನೀರಾ ಮತ್ತು ಹೆಂಡದ ನಡುವಿನ ವ್ಯತ್ಯಾಸವನ್ನು ಸಾರ್ವಜನಿಕರಿಗೆ ತಿಳಿಸಬೇಕು. ನೀರಾದ ಆರೋಗ್ಯ ಮಹತ್ವವನ್ನು ಪ್ರಚುರಪಡಿಸಬೇಕು. ಸಿಹಿ ನೀರಾ ಉತ್ಪನ್ನಗಳನ್ನು ಮಾರುಕಟ್ಟೆಗೆ ಪರಿಚಯಿಸಬೇಕು' ಎಂದು ಸಿಹಿ ನೀರಾ ಪ್ರಸರಣ ಸಮಿತಿ ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ವಿಧಾನಸಭಾ ಅಧ್ಯಕ್ಷ ಕಾಗೋಡು ತಿಮ್ಮಪ್ಪ ಅವರಲ್ಲಿ ಮನವಿ ಮಾಡಿದರು.

ಬೆಳಗಾವಿಯ ಸುವರ್ಣ ಸೌಧದಲ್ಲಿ ಸೋಮವಾರ ಸಿಎಂ ಕಚೇರಿಯಲ್ಲೇ ಸಿದ್ದರಾಮಯ್ಯ ಹಾಗೂ ಕಾಗೋಡು ತಿಮ್ಮಪ್ಪ ಅವರನ್ನು ಭೇಟಿಯಾದ ಸಿಹಿನೀರಾ ಪ್ರಸರಣ ಸಮಿತಿಯ ಸಂಚಾಲಕ ಚಳ್ಳಕೆರೆ ಸೋಮಶೇಖರ ರೆಡ್ಡಿ ಮತ್ತು ಅವರ ತಂಡ, ಸಿಹಿ ನೀರಾ ಬೆಲ್ಲದಿಂದ ತಯಾರಿಸಿದ ಚಾಕಲೇಟ್, ಬೆಲ್ಲ, ಕುಕ್ಕೀಸ್, ಬಿಸ್ಕತ್ತು ಮತ್ತು ನೀರಾ ಶೀಶೆಯನ್ನು ಉಡುಗೊರೆಯಾಗಿ ನೀಡಿದ್ದಾಗಿ ಸಿಹಿನೀರಾ ಪ್ರಸರಣ ಸಮಿತಿ ಸದಸ್ಯ ಆನೇಕಟ್ಟೆ ವಿಶ್ವನಾಥ್ ತಿಳಿಸಿದರು.

ಸಿಎಂ ಭೇಟಿ ನಂತರ 'ಪತ್ರಿಕೆ' ಜತೆ ದೂರವಾಣಿ ಮೂಲಕ ಮಾತನಾಡಿದ ವಿಶ್ವನಾಥ್, 'ನೀರಾ ಉತ್ಪನ್ನಗಳನ್ನು ಕಂಡು ಮುಖ್ಯಮಂತ್ರಿ ಮತ್ತು ಸಭಾಧ್ಯಕ್ಷರು ಖುಷಿಪಟ್ಟರು. ಸರ್ಕಾರ ಪಾಲಿಸಿ ರೂಪಿಸಿದ್ದಕ್ಕೆ ಸಾರ್ಥಕವಾಯಿತು' ಎಂಬ ಭಾವನೆಯನ್ನು ವ್ಯಕ್ತಪಡಿಸಿದರು' ಎಂದು ತಿಳಿಸಿದರು.

'ಸಿಹಿ ನೀರಾ ಮತ್ತು ಹೆಂಡದ ನಡುವಿನ ವ್ಯತ್ಯಾಸವನ್ನು ಇಬ್ಬರಿಗೂ ಮನವರಿಕೆ ಮಾಡಿಕೊಟ್ಟೆವು. ನೀರಾದಲ್ಲಿರುವ ಆರೋಗ್ಯದ ಅಂಶಗಳನ್ನು ವಿವರಿಸಿದೆವು. ಇದರ ಉತ್ಪನ್ನಗಳು ಮತ್ತು ಮಾರುಕಟ್ಟೆ ಕುರಿತು ವಿವರಣೆ ನೀಡಿದೆವು' ಎಂದು ವಿಶ್ವನಾಥ್ ವಿವರಿಸಿದರು.

'ಇದೇ ಉತ್ಪನ್ನಗಳನ್ನು ಎಲ್ಲ ಶಾಸಕರಿಗೂ, ಸಚಿವರಿಗೂ ವಿತರಿಸುವ ಇಂಗಿತ ವ್ಯಕ್ತಪಡಿಸಿದಾಗ, 15ರ ನಂತರ ಬೆಂಗಳೂರಿನ ವಿಧಾನಸೌಧದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಸಿದ್ದರಾಮಯ್ಯ ಅವರು ಸಲಹೆ ನೀಡಿದರು. ಅವರ ಸೂಚನೆ ಪ್ರಕಾರ, 15ರ ನಂತರ ನೀರಾ ಉತ್ಪನ್ನಗಳನ್ನು ಎಲ್ಲ ಶಾಸಕರು, ಸಚಿವರಿಗೆ ಉಡುಗೊರೆಯಾಗಿ ನೀಡಿ ಸಿಹಿ ನೀರಾ ಉತ್ಪನ್ನಗಳ ಮಾರಾಟಕ್ಕೆ ಉತ್ತೇಜನ ನೀಡಲು ಮನವಿ ಮಾಡುತ್ತೇವೆ' ಎಂದರು.

ಸಿಎಂ ಅವರ ಭೇಟಿಯ ನಿಯೋಗದಲ್ಲಿ ತುರುವೇಕೆರೆ ತೆಂಗು ಉತ್ಪಾದಕರ ಕಂಪೆನಿ ಅಧ್ಯಕ್ಷ ಸೋಮಶೇಖರ್, ಹೇಮಕಲ್ಪ ತೆಂಗು ಉತ್ಪಾದಕರ ಕಂಪೆನಿ ಅಧ್ಯಕ್ಷ ಮೃತ್ಯುಂಜಯಪ್ಪ, ಸಿಹಿ ನೀರಾ ಪ್ರಸರಣ ಸಮಿತಿ ಸದಸ್ಯರಾದ ತುರುವೇಕೆರೆ ಜಯಕುಮಾರ್, ಗುಬ್ಬಿಯ ವಿವೇಕ, ಮಂಡ್ಯದ ಮಹಾರಾಜ ತೆಂಗು ಉತ್ಪಾದಕರ ಕಂಪೆನಿಯ ನಾಗರಾಜ್ ಹಾಜರಿದ್ದರು.



ಬೆಳಗಾವಿಯ ಸುವರ್ಣ ಸೌಧದ ಸಿಎಂ ಕಚೇರಿಯಲ್ಲಿ ಸೋಮವಾರ ರಾಜ್ಯ ಸಿಹಿ ನೀರಾ ಪ್ರಸರಣ ಸಮಿತಿ ಸದಸ್ಯರು ಉಡುಗೊರೆಯಾಗಿ ನೀಡಿದ ಸಿಹಿ ನೀರಾ ಉತ್ಪನ್ನಗಳು ಮತ್ತು ನೀರಾ ಕುರಿತ ದಾಖಲೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ವಿಧಾನಸಭಾಧ್ಯಕ್ಷ ಕಾಗೋಡು ತಿಮ್ಮಪ್ಪ ವೀಕ್ಷಿಸಿದರು.

**ಮುಖ್ಯಾಂಶಗಳು**

- ಸಿಹಿ ನೀರಾ ಉತ್ಪನ್ನಗಳ ಉಡುಗೊರೆ
- ನೀರಾ ಆರೋಗ್ಯ ಮಾಹಿತಿಯ ವಿವರಣೆ
- 15ರ ನಂತರ ಶಾಸಕರಿಗೆ ಉಡುಗೊರೆ